# ಕಳವು ಕಲಿಸಿದೆಮ್ಮ ಗೋಪಿ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 69
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 182
3. **Note:** Lyrics given here are as per Ref. 1. The wordings in Ref. 2 are similar to Ref. 1 with few minor differences, which are not considered here.
4. **Note:** Singer has followed these lyrics.

ರಾಗ: ಧನ್ಯಾಸಿ ತಾಳ: ಅಟ

ಕಳವು ಕಲಿಸಿದೆಮ್ಮ ಗೋಪಿ ಕಮಲನಾಭಗೆ || ಪ ||
ಉಳಿಸಿಕೊಂಡೆಯ ನಿಮ್ಮ ಮನೆಯ ಪಾಲು ಬೆಣ್ಣೆಯ || ಅಪ ||

ಆರೂ ಏಳದ ಮುನ್ನ ಎಬ್ಬಿಸಿ ಶೃಂಗಾರ ಮಾಡಿ
ಗೀರು ಗಂಧವ ಹಚ್ಚಿ ಹಾರವ ಹಾಕಿ
ಕೇರಿ ಕೇರಿ ಪಾಲು ಬೆಣ್ಣೆ ಸೂರೆ ಮಾಡಿ ಬಾರೆನ್ನುತ
ವಾರಿಜನಾಭನ ಕಳುಹಿದೆ ವನಜ-ನಯನನ || 1 ||

ಚಿತ್ತಜನಯ್ಯನ ಕೈಗೆ ಚಿನ್ನದ ಚೆಂಡನೆ ಕೊಟ್ಟು
ಅರ್ತಿಯಿಂದ ಸಿಂಗರಿಸಿ ಆಡಿಬಾರೆಂದು
ಕತ್ತಲೆ ಬೀದಿಯ ಸುತ್ತೆ ಕಸ್ತೂರಿ ತಿಲಕವನಿಟ್ಟು
ನಿತ್ಯಾನಂದಗೆ ನಿಲುವುಗನ್ನಡಿಯ ತೋರಿ || 2 ||

ಸಣ್ಣ ಮಲ್ಲಿಗೆ ಮುಡಿಸಿ ಬಣ್ಣದ ವಲ್ಲಿಯ ಹೊದಿಸಿ
ಹೆಣ್ಣುಗಳ ಒಲಿಸುವಂತೆ ಹೇಳಿ ಬುದ್ಧಿಯ
ಹುಣ್ಣಿಮೆ ಮೀಸಲ ಪಾಲು ಉಣ್ಣು ಉಣ್ಣು ಮೆಲ್ಲೆನುತ್ತ
ಚಿಣ್ಣನ ಕಳುಹಿದೆಯಮ್ಮ ಉಣ್ಣಲಿಕ್ಕದೆ || 3 ||

ವಾರಿಜಾಕ್ಷ ಮಾಡಿದಂಥ ದೂರು ಹೇಳಿದರೆ ನಿಮಗೆ
ದೂರು-ಬಡಕರೆಂದು ಗೋಪಿ ಬೈವೆ ನಮ್ಮನು
ಊರು ಮಾಡಿದ ಕೊಳಗ ತಾಯಿ ಮಾಡಿದ ಹೊಟ್ಟೆ
ವಾರಿಜನಾಭನ ಕರೆದು ಗೋಪಿ ಬುದ್ಧಿಯ ಹೇಳೆ || 4 ||

ಹೊಟ್ಟೆಬಾಕನಿವ ಬೆಟ್ಟದೊಡೆಯಗೆ ಪ್ರಿಯ
ಇಟ್ಟುಕೊಂಡೀರೇಳು ಭುವನ ಉದರದಲ್ಲಿಯೆ
ಎಷ್ಟು ಹೇಳಿದರೂ ಕೇಳ ಏನು ಮಾಡಲಮ್ಮ ನಾನು
ಕಟ್ಟು ಮಾಡಿಸಲು ಬೇಕು ಪುರಂದರ ವಿಠಲಗೆ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಮತ್ತೊಬ್ಬ ಗೋಪಿಯಳ ದೂರು.

**ಊರು ಮಾಡಿದ ಕೊಳಗ ತಾಯಿ ಮಾಡಿದ ಹೊಟ್ಟೆ** = ಊರ ಹಿರಿಯರು ನಿರ್ಣಯಿಸಿದ ಅಳತೆ ಪಾತ್ರೆ. (ತಾಯಿ ಉಣ್ಣಿಸಿದ ಪ್ರಮಾಣದಲ್ಲಿ ಮಗುವಿನ ಹೊಟ್ಟೆ ಚಿಕ್ಕದು - ದೊಡ್ಡದು)

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** kalla, mane, halu, benne, gandha, keri, Krishna, bangara, irulu, Kasturi, mallige, hennu, buddi, oota, gopi, bayyi, ooru, tayi, udara, Priya,
**Pravachana:** NA
**Explanation:** NA